ದಿನಾಂಕಃ 07-08-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ **2** ನೇ ಎದುರುದಾರರ ಪರವಾಗಿ ಶ್ರೀ ಕೆ.ಎಂ.ಜೆ. ವಕೀಲರಿಂದಃ -</u>

3. ಸರ್ವೆ ನಂಬರು.24/4 ರಲ್ಲಿ 7 ಗುಂಟೆ ಖುಷ್ಕಿ ಜಮೀನು ಭೂಸ್ವಾಧೀನಗೊಂಡಿದೆ ಎಂದರೆ ಸರಿ. ಆ ಸಂಬಂಧ ರೂ.6,60,381/- ಪರಿಹಾರ ಸಂದಾಯವಾಗಿದೆ ಎಂದರೆ ಸರಿ. ಇದು ಉತ್ತಮವಾದ ಪರಿಹಾರ ಎಂದರೆ ಸರಿಯಲ್ಲ. ಸದರಿ ಜಮೀನು ಉತ್ತಮ ಬೆಲೆ ಬಾಳುತ್ತದೆ ಎಂದು ತೋರಿಸುವ ಸಲುವಾಗಿ ನಾನು ಯಾವುದೇ ದಾಖಲಾತಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

4. ಸ್ವಾಧೀನಗೊಂಡ ಜಮೀನಿನಲ್ಲಿದ್ದ 8 ತೆಂಗಿನ ಮರಗಳಿಗೆ ನ್ಯಾಯಯುತ ಪರಿಹಾರವನ್ನು ಕೊಡಲಾಗಿದೆ ಎಂದರೆ ಸರಿಯಲ್ಲ. ಪರಿಹಾರ ಪಡೆದುಕೊಂಡ ನಂತರ ಸರಿಯಾದ ಸಮಯದಲ್ಲಿ ಸರ್ಕಾರದ ಮುಂದೆ ನಾನು ತಕರಾರು ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

5. ಅಜ್ಜಂಪುರ ಗ್ರಾಮದಿಂದ ಸ್ವಾಧೀನಗೊಂಡ ನನ್ನ ಜಮೀನು 300-400 ಮೀಟರ್ ದೂರದಲ್ಲಿರುತ್ತದೆ. ಈ ಕುರಿತು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಜ್ಜಂಪುರ ಗ್ರಾಮಕ್ಕೆ ನಮ್ಮ ಜಮೀನು ಹೊಂದಿಕೊಂಡಿರುತ್ತದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

6. ಸ್ವಾಧೀನಗೊಂಡ ನನ್ನ ಜಮೀನು ಕೃಷಿ ಭೂಮಿ ಎಂದರೆ ಸರಿ. ನಿವೇಶನದ ರೀತಿಯಲ್ಲಿ ಪರಿಹಾರ ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರರು ಸರಿಯಾದ

ಪರಿಹಾರವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ.

7. ನಿಪಿ.11 ಮತ್ತು ಪಿ.12 ಅಜ್ಜಂಪುರ ಗ್ರಾಮದ ಹೃದಯ ಭಾಗದಲ್ಲಿರುವಂತಹ ನಿವೇಶನಗಳಿಗೆ ಸಂಬಂದಪಟ್ಟಿದ್ದು ಅವುಗಳನ್ನು ಆಧಾರಿಸಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ಆ ಎರಡು ಕ್ರಯಪತ್ರಗಳು ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲ ಎಂದರೆ ಸರಿಯಲ್ಲ.

8. ಭೂಸ್ವಾಧೀನಾಧಿಕಾರಿಗಳು ತಾರತಮ್ಯ ಮಾಡಿರುತ್ತಾರೆ ಎಂದು ನಾನು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಮ್ಮ ಜಮೀನು ಮೌಲ್ಯಯುತವಾದ ಜಮೀನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಯಾವ ದಾಖಲಾತಿಗಳು ನಮ್ಮ ಪ್ರಕರಣಕ್ಕೆ ಸಂಬದಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಿಂತ ಹೆಚ್ಚಿನ ಪರಿಹಾರವನ್ನು ಭೂಸ್ವಾಧೀನಾಧಿಕಾರಿಗಳು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪರಿಹಾರ ಪಡೆಯಲು ನಾನು ಸಕಾರಣ ತೋರಿಸಿರುವುದಿಲ್ಲ ಮತ್ತು ಆ ಕುರಿತು ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಕಾನೂನಿನಗುಣವಾಗಿ 1 ನೇ ಎದುರುದಾರ ಪರಿಹಾರವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **1** ನೇ ಎದುರುದಾರರ ಪರವಾಗಿ ಡಿಜಿಪಿ ರವರಿಂದಃ</u>

9. ಈ ಪ್ರಕರಣ ಅಧಿಸೂಚನೆಯ ಸಂದರ್ಭದಲ್ಲಿ ತೋಟಗಾರಿಕೆ, ಅರಣ್ಯ, ಉಪ ನೋಂದಣಾಧಿಕಾರಿ ಇವರಲ್ಲಿ ಚಾಲ್ತಿಯಲ್ಲಿದ್ದ ದರದಂತೆ ವೈಜ್ಞಾನಿಕವಾಗಿ ಪರಿಹಾರ ನೀಡಲಾಗಿರುತ್ತದೆ ಎಂದರೆ ಸರಿಯಲ್ಲ.

(ಉಳಿದಂತೆ 2 ನೇ ಎದುರುದಾರರ ಪರ ಮಾಡಲಾದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲಾಗಿದೆ).

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಕಿರಣ್ ಕಿಣಿ)
1 ನೇ ಹೆಚ್ಚುವರಿ ವಿಶೇಷ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕಮಗಳೂರು.

ಸಾಕ್ಷಿಯ ಸಹಿ